All India Radio: Bangalore
National Bulletin In Kannada
01.10.2025 7.35 a.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

01.10.2025 7.35 a.m.

< > < > < > < >

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ಆರ್‌ಎಸ್‌ಎಸ್‌ನ ಶತಮಾನೋತ್ಸವ ಸಮಾರಂಭ; ಪ್ರಧಾನಿ ನರೇಂದ್ರ ಮೋದಿ ಭಾಗಿ

೨. ಭಾರತೀಯ ರಿಸರ್ವ್ ಬ್ಯಾಂಕ್-ಆರ್‌ಬಿಐ ಹಣಕಾಸು ನೀತಿ ಇಂದು ಪ್ರಕಟ

೩. ಭಾರತದೊಂದಿಗಿನ ಇಎಫ್‌ಟಿಎ ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ - ಟಿಇಪಿಎ ಇಂದಿನಿಂದ ಜಾರಿ

೪. ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್; ಉದ್ಘಾಟನಾ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಭಾರತಕ್ಕೆ ೫೯ ರನ್ ಜಯ

><><><><><

ಪ್ರಧಾನಿ ನರೇಂದ್ರ ಮೋದಿ ಇಂದು ಬೆಳಿಗ್ಗೆ ನವದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ-ಆರ್‌ಎಸ್‌ಎಸ್‌ನ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಶತಮಾನೋತ್ಸವ ಆಚರಣೆಯು ಆರ್‌ಎಸ್‌ಎಸ್‌ನ ಪರಂಪರೆ, ಅದರ ಸಾಂಸ್ಕೃತಿಕ ಕೊಡುಗೆಗಳು ಮತ್ತು ರಾಷ್ಟ್ರೀಯ ಏಕತೆಯಲ್ಲಿನ ಪಾತ್ರದ ಮೇಲೆ ಕೇಂದ್ರೀಕರಿಸಲಿದೆ. ಈ ಸಂದರ್ಭದಲ್ಲಿ, ರಾಷ್ಟ್ರಕ್ಕೆ

ಆರ್‌ಎಸ್‌ಎಸ್ ಕೊಡುಗೆಗಳನ್ನು ಎತ್ತಿ ತೋರಿಸುವ ವಿಶೇಷವಾಗಿ ವಿನ್ಯಾಸಗೊಳಿಸಲಾದ ಸ್ಮರಣಾರ್ಥ ಅಂಚೆ ಚೀಟಿ ಮತ್ತು ನಾಣ್ಯವನ್ನು ಪ್ರಧಾನಿ ಬಿಡುಗಡೆ ಮಾಡಲಿದ್ದಾರೆ.

><><><><

೧೯೫೦ ರಲ್ಲಿ ರಾಷ್ಟ್ರಪತಿಗಳ ಅಂಗರಕ್ಷಕ ಪಡೆ- ಪಿಬಿಜಿ ನೇಮಕಗೊಂಡ ನಂತರ, ೭೫ ವರ್ಷಗಳ ಅದ್ಭುತ ಸೇವೆ ಸಲ್ಲಿಸಿದ ಸ್ಮರಣಾರ್ಥವಾಗಿ ರಾಷ್ಟ್ರಪತಿ ಭವನದಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ವಜ್ರ ಮಹೋತ್ಸವದ ಬೆಳ್ಳಿ ಕಹಳೆ ಮತ್ತು ಬ್ಯಾನರ್ ಅನ್ನು ಪ್ರದಾನ ಮಾಡಿದರು. ಬಳಿಕ ರಾಷ್ಟ್ರಪತಿ, ವೃತ್ತಿಪರ ಶ್ರೇಷ್ಠತೆ ಮತ್ತು ಅತ್ಯುತ್ತಮ ಮಿಲಿಟರಿ ಸಂಪ್ರದಾಯಗಳಿಗೆ ಬದ್ಧತೆಗಾಗಿ, ಪಿಬಿಜಿಯನ್ನು ಅಭಿನಂದಿಸಿದರು. ಈ ಗೌರವ, ಮಹತ್ವದ ಜವಾಬ್ದಾರಿಯನ್ನು ಹೊಂದಿದೆ ಎಂಬುದನ್ನು ಎಲ್ಲಾ ಅಂಗರಕ್ಷಕರು ತಿಳಿದಿರಬೇಕು ಎಂದು ಹೇಳಿದರು.

><><><><

ಭಾರತೀಯ ರಿಸರ್ವ್ ಬ್ಯಾಂಕ್ -ಆರ್‌ಬಿಐ ಇಂದು ತನ್ನ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಆರ್ಥಿಕ ಪರಿಸ್ಥಿತಿಗಳನ್ನು ಪರಿಶೀಲಿಸಲು ಮತ್ತು ಪ್ರಮುಖ ನೀತಿ ದರಗಳನ್ನು ನಿರ್ಧರಿಸಲು ಆರ್‌ಬಿಐನ ಹಣಕಾಸು ನೀತಿ ಸಮಿತಿ - ಕಳೆದ ಸೆಪ್ಟೆಂಬರ್ ೨೯ ರಿಂದ ಮುಂಬೈನಲ್ಲಿ ತನ್ನ ಮೂರು ದಿನಗಳ ಸಭೆಯನ್ನು ಪ್ರಾರಂಭಿಸಿತು. ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸಭೆಯ ನಿರ್ಧಾರಗಳನ್ನು ಇಂದು ಬೆಳಿಗ್ಗೆ ಅನಾವರಣಗೊಳಿಸಲಿದ್ದಾರೆ. ಸಾಲದ ವೆಚ್ಚಗಳು, ಸಾಲ ದರಗಳು ಮತ್ತು ಒಟ್ಟಾರೆ ಆರ್ಥಿಕ ಚಟುವಟಿಕೆಯ ಮೇಲೆ ಇದು ಪರಿಣಾಮ ಬೀರುವುದರಿಂದ ಈ ಘೋಷಣೆಯನ್ನು ಮಾರುಕಟ್ಟೆಗಳು, ವ್ಯವಹಾರಗಳು ಮತ್ತು ನೀತಿ ನಿರೂಪಕರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ.

><><><><

ಭಾರತೀಯ ರಿಸರ್ವ್ ಬ್ಯಾಂಕ್ - ಆರ್.ಬಿ.ಐ -"ತ್ವರಿತ ಪಾವತಿಯನ್ನು ಸುಗಮಗೊಳಿಸುವುದು - ನಿಷ್ಕ್ರಿಯ ಖಾತೆಗಳು ಮತ್ತು ಕ್ಲೈಮ್ ಮಾಡದ ಠೇವಣಿಗಳು" ಎಂಬ ಯೋಜನೆಯನ್ನು ಘೋಷಿಸಿದೆ. ಒಂದು ವರ್ಷದ ಅವಧಿಯ ಈ ಯೋಜನೆ, ಇಂದಿನಿಂದ ಪ್ರಾರಂಭವಾಗಿ, ೨೦೨೬ರ ಸೆಪ್ಟೆಂಬರ್ ೩೦ ರಂದು ಕೊನೆಗೊಳ್ಳಲಿದೆ.

ಸಾರ್ವಜನಿಕರು ತಮ್ಮ ನಿಷ್ಕ್ರಿಯ ಖಾತೆಗಳನ್ನು ಸಕ್ರಿಯಗೊಳಿಸಲು ಮತ್ತು ಬ್ಯಾಂಕುಗಳಿಂದ ತಮ್ಮ ಕ್ಲೈಮ್ ಮಾಡದ ಠೇವಣಿಗಳನ್ನು ಪಡೆಯಲು ಇದು ಪ್ರೋತ್ಸಾಹಿಸುತ್ತಿದೆ. ಈ ಯೋಜನೆಯ ಮೂಲಕ, ಗ್ರಾಹಕರು, ತಮ್ಮ ನಿಷ್ಕ್ರಿಯ ಖಾತೆಗಳನ್ನು ಮರು-ಸಕ್ರಿಯಗೊಳಿಸಲು ಮತ್ತು ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಯಲ್ಲಿರುವ, ಕ್ಲೈಮ್ ಮಾಡದ ಮೊತ್ತವನ್ನು ಹಿಂದಿರುಗಿಸಲು, ಸಕ್ರಿಯವಾಗಿ ಮುಂದುವರಿಯುವಂತೆ ಪ್ರೋತ್ಸಾಹಿಸಲು ಆರ್.ಬಿ.ಐ ನಿರ್ಧರಿಸಿದೆ. ಈ ಯೋಜನೆಯು, ಅಸ್ತಿತ್ವದಲ್ಲಿರುವ ಕ್ಲೈಮ್ ಮಾಡದ ಠೇವಣಿಗಳ ಸ್ಟಾಕ್ ಮತ್ತು ಡಿ.ಇ.ಎ ನಿಧಿಗೆ ಹರಿವಿನ ಹೊಸ ಸಂಚಯನ, ಎರಡನ್ನೂ ಕಡಿಮೆ ಮಾಡುವ ಗುರಿ ಹೊಂದಿದೆ.

><><><><

ಭಾರತ-ಐರೋಪ್ಯ ಮುಕ್ತ ವ್ಯಾಪಾರ ಸಂಘ - ಇಎಫ್‌ಟಿಎ ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ - ಟಿಇಪಿಎ ಇಂದಿನಿಂದ ಜಾರಿಗೆ ಬರಲಿದೆ.  ಕಳೆದ ವರ್ಷದ ಮಾರ್ಚ್ ೧೦ ರಂದು ನವದೆಹಲಿಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇಎಫ್‌ಟಿಎ ಒಂದು ಪ್ರಮುಖ ಪ್ರಾದೇಶಿಕ ಸಂಘವಾಗಿದ್ದು, ಸರಕು ಮತ್ತು ಸೇವೆಗಳಲ್ಲಿ ಅಂತಾರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸಲು

ಹಲವಾರು ಉದಯೋನ್ಮುಖ ಅವಕಾಶಗಳನ್ನು ಹೊಂದಿದೆ. ಐಸ್ಲ್ಯಾಂಡ್, ಲಿಚ್ಟೆನ್‌ಸ್ಟೈನ್, ನಾರ್ವೆ ಮತ್ತು ಸ್ವಿಟ್ಜರ್ಲ್ಯಾಂಡ್ ಇಎಫ್‌ಟಿಎ ದೇಶಗಳಾಗಿದ್ದು, ಅವುಗಳಲ್ಲಿ ಸ್ವಿಟ್ಜರ್ಲ್ಯಾಂಡ್ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ. ನಾರ್ವೆ ನಂತರದ ಸ್ಥಾನದಲ್ಲಿದೆ. ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ, ಆಧುನಿಕ ಮತ್ತು ಮಹತ್ವಾಕಾಂಕ್ಷೆಯ ಒಪ್ಪಂದವಾಗಿದೆ ಈ ಒಪ್ಪಂದವು ಮುಂದಿನ ೧೫ ವರ್ಷಗಳಲ್ಲಿ ಭಾರತದಲ್ಲಿ ೧೦೦ ಬಿಲಿಯನ್ ಅಮೆರಿಕಾ ಡಾಲರ್ ಹೂಡಿಕೆಯ ಬದ್ಧತೆಯನ್ನು ಸಹ ಒಳಗೊಂಡಿಗೆ. ಈ ಹೂಡಿಕೆ ಒಂದು ದಶಲಕ್ಷ ನೇರ ಉದ್ಯೋಗಗಳ ಸೃಷ್ಟಿಗೆ ಸಹಕಾರಿಯಾಗುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಾರ, ಈ ವರ್ಷದ ಫೆಬ್ರವರಿಯಿಂದ ಮೀಸಲಾದ ಇಎಫ್‌ಟಿಎ ಡೆಸ್ಕ್ ಸಹ ಕಾರ್ಯನಿರ್ವಹಿಸುತ್ತಿದೆ, ಇದು ಭಾರತದಲ್ಲಿ ಹೂಡಿಕೆ, ವಿಸ್ತರಣೆ ಮತ್ತು ಕಾರ್ಯಾಚರಣೆಗಳನ್ನು ಸ್ಥಾಪಿಸುವಲ್ಲಿ ಇಎಫ್‌ಟಿಎ ವ್ಯವಹಾರಗಳನ್ನು ಬೆಂಬಲಿಸಲು ಹೂಡಿಕೆ ಸೌಲಭ್ಯಕ್ಕಾಗಿ ಏಕ-ಗವಾಕ್ಷಿ ವ್ಯವಸ್ಥೆಯಾಗಿದೆ. ಉದ್ಯಮಗಳು ಮತ್ತು ಸರ್ಕಾರದ ನಡುವೆ ನಿರಂತರ ಸಂವಾದವನ್ನು ಬೆಳೆಸಲು ಈ ವ್ಯವಸ್ಥೆ ಪ್ರಾಥಮಿಕ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ.

><><><><

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ಕೇಂದ್ರ ಸರ್ಕಾರ ಭಾರತದ ಜಿ-೨೦ ಯಶಸ್ಸನ್ನು ಯಾವರೀತಿ ಪ್ರದರ್ಶಿಸಿದೆ,

ಜಾಗತಿಕ ದಕ್ಷಿಣದ ಧ್ವನಿಯನ್ನು ವರ್ಧಿಸಿದೆ ಮತ್ತು ಭಾರತದ ಜಾಗತಿಕ ನಾಯಕತ್ವವನ್ನು ಹೇಗೆ ಬಲಪಡಿಸಿದೆ ಎಂಬುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ.

ವರದಿ: ಅಬಯ್ ( ೧ ನಿಮಿಷ ೩೧ ಸೆಕೆಂಡ್)

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಭಾರತ ಒಂದು ಅಸಾಧಾರಣ ಜಾಗತಿಕ ನಾಯಕನಾಗಿ ಹೊರಹೊಮ್ಮಿದೆ. ೨೦೨೩ ರಲ್ಲಿ ಭಾರತ, ಜಿ-೨೦ ಅಧ್ಯಕ್ಷತೆ ವಹಿಸಿ, ಜಾಗತಿಕವಾಗಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿತು ಅಲ್ಲದೇ, ಗುಂಪಿನಲ್ಲಿ ಆಫ್ರಿಕನ್ ಒಕ್ಕೂಟದ ಸದಸ್ಯತ್ವ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟದ ಪ್ರಾರಂಭ ಸೇರಿದಂತೆ, ಹಲವು ಮಹತ್ವದ ಫಲಿತಾಂಶಗಳನ್ನು ನೀಡಿತು. ಅಧ್ಯಕ್ಷತೆಯ ವಿಷಯವಾದ "ವಸುಧೈವ ಕುಟುಂಬಕಂ", ಭಾರತದ ನಾಗರಿಕ ನೀತಿ ಮತ್ತು ಜಾಗತಿಕ ಸಹಕಾರದ ಬಯಕೆಯನ್ನು ಪ್ರತಿಬಿಂಬಿಸಿತು. ನವದೆಹಲಿ ಘೋಷಣೆಯು, ನೀತಿ ಸುಸಂಬದ್ಧತೆ, ವಿಶ್ವಾಸಾರ್ಹ ವ್ಯಾಪಾರ ಮತ್ತು ಮಹತ್ವಾಕಾಂಕ್ಷೆಯ ಹವಾಮಾನ ಕ್ರಮದ ಮೇಲೆ ಕೇಂದ್ರೀಕರಿಸುವ, ಸಹಯೋಗದ ಮನೋಭಾವವನ್ನು ಸಾಕಾರಗೊಳಿಸಿತು. ಹಿಂದಿನ ಸವಾಲುಗಳ ಹೊರತಾಗಿಯೂ, ಎಲ್ಲಾ ೨೦ ಸದಸ್ಯ ರಾಷ್ಟ್ರಗಳು ಇದಕ್ಕೆ ಸಹಿ ಹಾಕಿದ್ದರಿಂದ, ಇದು ಗಮನಾರ್ಹವಾಗಿತ್ತು. ಜಿ-೨೦ಯ ಶಾಶ್ವತ ಸದಸ್ಯರಾಗಿ, ಆಫ್ರಿಕನ್ ಒಕ್ಕೂಟದ ಸೇರ್ಪಡೆಯು, ಜಾಗತಿಕ ಜನಸಂಖ್ಯೆಯ ೮೦ ಪ್ರತಿಶತವನ್ನು ಒಳಗೊಳ್ಳುವಂತೆ ವಿಸ್ತರಿಸಿತು. ಪ್ರಧಾನಿ ನರೇಂದ್ರ ಮೋದಿ, ಭಾರತದ ಅಧ್ಯಕ್ಷತೆಯು, ಎಲ್ಲಾ ಸಣ್ಣ ರಾಷ್ಟ್ರಗಳಿಗೆ ಧ್ವನಿಯನ್ನು ಒದಗಿಸಿದೆ ಎಂದು ಹೇಳಿದ್ದಾರೆ. ಸಾಮೂಹಿಕ ಹಿತಾಸಕ್ತಿಯನ್ನು ಪ್ರತಿನಿಧಿಸಲು ಪ್ರಧಾನಿಯವರಿಗೆ ಇದು ಅತ್ಯುತ್ತಮ ವೇದಿಕೆಯಾಯಿತು. ಜಾಗತಿಕ ದಕ್ಷಿಣಕ್ಕೆ ಧ್ವನಿ ನೀಡುವುದರ

ಜೊತೆಗೆ, ಭಾರತದ ಜಿ-೨೦ ಅಧ್ಯಕ್ಷತೆ, ದೇಶಾದ್ಯಂತ ಸಭೆಗಳನ್ನು ನಡೆಸುವ ಮೂಲಕ, ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಜಗತ್ತಿಗೆ ಪ್ರದರ್ಶಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಐತಿಹಾಸಿಕ ಛಾಪನ್ನು ಮೂಡಿಸಿದ ಈ ಕಾರ್ಯಕ್ರಮಗಳು, ಭಾರತದ ವೈವಿಧ್ಯಮಯ ಸಂಪ್ರದಾಯಗಳು ಮತ್ತು ಕಲಾತ್ಮಕ ಪರಂಪರೆಯನ್ನು ಜಾಗತಿಕವಾಗಿ ಎತ್ತಿ ತೋರಿಸಿದವು, ಸಂಸ್ಕೃತಿ ಮತ್ತು ಆರ್ಥಿಕ ಬೆಳವಣಿಗೆ ಎರಡರಲ್ಲೂ ಭಾರತವನ್ನು ನಾಯಕನಾಗಿ ಪ್ರತಿಬಿಂಬಿಸುವಲ್ಲಿ ಈ ಸಂದರ್ಭ ಮಹತ್ವ ಪಡೆಯಿತು.

><><><><

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಪಂಜಾಬ್ ಜನರೊಂದಿಗೆ ನಿಂತಿದ್ದು, ರಾಜ್ಯದ ಪ್ರವಾಹ ಪೀಡಿತ ಜನರಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡಲು ಬದ್ಧವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ನಿನ್ನೆ ಸಂಜೆ ನವದೆಹಲಿಯಲ್ಲಿ ಸಚಿವರನ್ನು ಭೇಟಿ ಮಾಡಿ, ಮಳೆಗಾಲದ ಪ್ರವಾಹದ ನಂತರ ರಾಜ್ಯದಲ್ಲಿ ಉಂಟಾದ ಹಾನಿಯ ಪ್ರಮಾಣವನ್ನು ವಿವರಿಸಿದರು. ವಿಪತ್ತು ಪರಿಹಾರ ಮತ್ತು ಪುನಃಸ್ಥಾಪನೆಗಾಗಿ ರಾಜ್ಯಕ್ಕೆ ಹೆಚ್ಚುವರಿ ಹಣವನ್ನು ನೀಡುವಂತೆಯೂ ಅವರು ಕೋರಿದರು. ಸಭೆಯ ಸಮಯದಲ್ಲಿ, ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯಲ್ಲಿ ರಾಜ್ಯ ೧೨ ಸಾವಿರದ ೫೮೯ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಹೊಂದಿದೆ ಎಂದು ಮುಖ್ಯಮಂತ್ರಿಗೆ ತಿಳಿಸಲಾಯಿತು, ಇದನ್ನು ಭಾರತ ಸರ್ಕಾರದ ಮಾನದಂಡಗಳ ಪ್ರಕಾರ ಸಂತ್ರಸ್ತ ಜನರಿಗೆ ಪರಿಹಾರ ಮತ್ತು ತಕ್ಷಣದ ಪುನಃಸ್ಥಾಪನೆಗಾಗಿ ಬಳಸಬಹುದು. ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹದ ಸಮಯದಲ್ಲಿ ಕೇಂದ್ರ ಸರ್ಕಾರವು

ಕೇಂದ್ರ ಸಂಸ್ಥೆಗಳಿಂದ ರಾಜ್ಯ ಆಡಳಿತಕ್ಕೆ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡಿದೆ ಎಂದು ಗೃಹ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

><><><><

ಗುವಾಹಟಿಯಲ್ಲಿ ನಿನ್ನೆ ನಡೆದ ಐಸಿಸಿ ಮಹಿಳಾ ವಿಶ್ವಕಪ್-೨೦೨೫ ರ ಉದ್ಘಾಟನಾ ಪಂದ್ಯದಲ್ಲಿ, ಭಾರತ ತಂಡ, ಶ್ರೀಲಂಕಾವನ್ನು ೫೯ ರನ್‌ಗಳಿಂದ ಪರಾಭವಗೊಳಿಸಿ, ಶುಭಾರಂಭ ಮಾಡಿದೆ. ಟಾಸ್ ಸೋತು, ಮೊದಲು ಬ್ಯಾಟ್ ಮಾಡಿದ ಭಾರತ, ೪೭ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೨೬೯ ರನ್ ಗಳಿಸಿತು. ಭಾರತದ ೨೭೧ ರನ್‌ಗಳ ಪರಿಷ್ಕೃತ ಡಿ.ಎಲ್.ಎಸ್ ಗುರಿ ಬೆನ್ನಟ್ಟಿದ ಶ್ರೀಲಂಕಾ ವನಿತೆಯರ ತಂಡ, ೪೫.೪ ಓವರ್‌ಗಳಲ್ಲಿ, ೨೧೧ ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಸೋಲೊಪ್ಪಿತು. ಭಾರತದ ಪರ, ಅಮನ್‌ಜೋತ್ ಕೌರ್ ಅತ್ಯಧಿಕ ೫೭ ರನ್ ಗಳಿಸಿದರು.. ಶ್ರೀಲಂಕಾದ ಬೌಲರ್ ಇನೋಕಾ ರಣವೀರ ನಾಲ್ಕು ವಿಕೆಟ್‌ಗಳನ್ನು ಪಡೆದರು. ಪಂದ್ಯವನ್ನು ಮಳೆ ಅಡ್ಡಿಪಡಿಸಿದ ಕಾರಣ ಓವರ್‌ಗಳನ್ನು ೪೭ ಕ್ಕೆ ಇಳಿಸಲಾಯಿತು. ಡಕ್‌ವರ್ತ್-ಲೂಯಿಸ್ ನಿಯಮದ ಅನ್ವಯ, ಶ್ರೀಲಂಕಾಕ್ಕೆ ಗೆಲ್ಲಲು ೨೭೧ ರನ್‌ಗಳ ಪರಿಷ್ಕೃತ ಗುರಿ ನಿಗದಿಪಡಿಸಲಾಯಿತು. ಭಾರತದ ದೀಪ್ತಿ ಶರ್ಮಾ ಪಂದ್ಯಶ್ರೇಷ್ಠ ಆಟಗಾರ್ತಿ ಪ್ರಶಸ್ತಿಗೆ ಭಾಜನರಾದರು. ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ನಡುವಿನ ಬಹು ನಿರೀಕ್ಷಿತ ಪಂದ್ಯ ಭಾನುವಾರ ಕೊಲಂಬೊದಲ್ಲಿ ನಡೆಯಲಿದೆ.

><><><><